# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡುವಳಿಗಳು

| ವಾದಿಗಳು: | ಪ್ರತಿವಾದಿಗಳು: |
|---|---|
| ಶ್ರೀ ಟಿ.ಬಸವಕುಮಾರ ತಂದೆ ದಿ॥ ಟಿ.ವಿರುಪಾಕ್ಷಪ್ಪ ಓಬಳಪುರಂ ಗ್ರಾಮ ರಾಯದುರ್ಗಾ ತಾ॥ | ಕಂದಾಯ ಪರಿವೀಕ್ಷಕರು, ರೂಪನಗುಡಿ |

ವಿಷಯ:ಬಳ್ಳಾರಿ ತಾಲೂಕು ರೂಪನಗುಡಿ ಹೋಬಳಿ ಎತ್ತಿನಬೂದಿಹಾಳು ಗ್ರಾಮದ ಸರ್ವೆ ನಂ:276/ಬಿ/ಅ ವಿಸ್ತೀರ್ಣ:3.98 , ಸರ್ವೆ ನಂ:326/ಎ ವಿಸ್ತೀರ್ಣ:2.22 ಎಕರೆ ಜಮೀನಿಗೆ ಸಂಬಂಧಿಸಿದಂತೆವಿಚಾರಣೆ ಕುರಿತು.

ಉಲ್ಲೇಖ:ಕಂದಾಯ ನಿರೀಕ್ಷಕರು, ರೂಪನಗುಡಿ ಇವರ M.R.H.NO:34/2014-15 ದಿನಾಂಕ:05-02-2015ರ ಆದೇಶ ಮೇರೆಗೆ.

********

ಪ್ರಸ್ತಾವನೆ,

ಬಳ್ಳಾರಿ ತಾಲೂಕು ರೂಪನಗುಡಿ ಹೋಬಳಿ ಎತ್ತಿನಬೂದಿಹಾಳು ಗ್ರಾಮದ ಸರ್ವೆ ನಂ:276/ಬಿ/ಅ ವಿಸ್ತೀರ್ಣ:3.98 ಎಕರೆ ಜಮೀನಿನ ಹಾಲಿ ಭೂಮಾಲಿಕರಾದ ಟಿ.ಪಾರ್ವತಮ್ಮ ಗಂಡ ದಿ॥ ಟಿ. ವಿರುಪಾಕ್ಷಪ್ಪ ಹೆಸರಿನಲ್ಲಿ ಜಮೀನು ಇದ್ದು ಇವರು ದಿನಾಂಕ:29-11-2014ರಂದು ಮೃತಪಟ್ಟಿರುತ್ತಾರೆ. ಇವರ ಪತಿ ಶ್ರೀ ಟಿ.ವಿರುಪಾಕ್ಷಪ್ಪ ದಿನಾಂಕ:29-12-2000 ರಂದು ಮೃತಪಟ್ಟಿರುತ್ತಾರೆ. ಅದರಂತೆ ಅರ್ಜಿದಾರರಾದ ಶ್ರೀ ಟಿ.ಬಸವಕುಮಾರ ತಂದೆ ದಿ॥ ಟಿ.ವಿರುಪಾಕ್ಷಪ್ಪ ಪೌತಿ ಹಕ್ಕುಬದಲಾವಣೆ ಮಾಡಲು ಅರ್ಜಿ ಸಲ್ಲಿಸಿದ್ದು M.R.H.NO:34/2014-15 ದಿನಾಂಕ:05-02-2015ರ ಅವರ ಮನವಿಯಂತೆ ನಮೂನೆ-21 ಗ್ರಾಮದಲ್ಲಿ ಜಾರಿ ಮಾಡಲಾಗಿರುತ್ತದೆ. ನಿಗದಿತ ಅವದಿಯಲ್ಲಿ ಯಾವುದೇ ತಕರಾರು ಬಂದಿರುವುದಿಲ್ಲ. ಆದರೆ ಕಂದಾಯ ಪರಿವೀಕ್ಷಕರು ರೂಪನಗುಡಿ, ಇವರು ವಂಶವೃಕ್ಷದಲ್ಲಿ ಇನ್ನೂಳಿದ ಹೆಣ್ಣುಮಕ್ಕಳ ಹೆಸರು ಸೇರಿಸಿರುವುದಿಲ್ಲ ಮತ್ತು ಒಪ್ಪಿಗೆ ಪತ್ರವನ್ನು ನೀಡಿರುವುದಿಲ್ಲವೆಂದು ಸದ್ರಿ ಹಕ್ಕು ಬದಲಾವಣೆಯನ್ನು ತಿರಸ್ಕರಿಸಿ, ಈ ಕಡತವನ್ನು ವಿಚಾರಣೆ ನಡೆಸಿ ಇತ್ಯರ್ಥ ಪಡಿಸಲು ಕಡತವನ್ನು ಈ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ.

ಈ ಸಂಬಂಧ ವಿಚಾರಣೆ ನಡೆಸಲು ದಿನಾಂಕ:26-06-2015, 06-07-2015, 27-07-2015, 03-08-2015 ರಂದು ಸಂಬಂಧ ಪಟ್ಟವರಿಗೆ ನೋಟಿಸು ಜಾರಿಮಾಡಿ ವಿಚಾರಣೆಯನ್ನು ನಡೆಸಲಾಯಿತು. ಅರ್ಜಿದಾರರು ವಿಚಾರಣೆಗೆ ಹಾಜರಾಗಿ ತನ್ನ ಸಹೋದಿಯರಾದ 1)ಶ್ರೀಮತಿ ನಿರ್ಮಲ ಗಂಡ ಮಲ್ಲಯ್ಯ, 2)ಶ್ರೀಮತಿ ತೇಜಮ್ಮ ಗಂಡ ಜಯರಾಮ, 3)ಶ್ರೀಮತಿ ಅನಿತಾ ತಂದೆ ಶ್ರೀನಿವಸಾಸ, 4)ಶ್ರೀಮತಿ ಹಿಮಬಿಂದು ಗಂಡ ಕುಬೇರ ಇವರು ತನ್ನ ಅಣ್ಣನಾದ ಶ್ರೀ ಟಿ.ಬಸವಕುಮಾರ ತಂದೆ ದಿ॥ ಟಿ.ವಿರುಪಾಕ್ಷಪ್ಪ ಇವರಿಗೆ ಹಕ್ಕುಬದಲಾವಣೆ ಮಾಡಲು ನಮಗೆ ಮತ್ತು ನಮ್ಮ ಮಕ್ಕಳಿಗೆ ಯಾವುದೇ ರೀತಿಯಾ ತಕರಾರು ಇರುವುದಿಲ್ಲವೆಂದು ಲಿಖಿತ ಹೇಳಿಕೆ ನೀಡಿರುತ್ತಾರೆ. ಕಾರಣ ಅರ್ಜಿದಾರರ ಹೆಸರಿಗೆ ಪೌತಿ ಹಕ್ಕು ಬದಲಾವಣೆ ಮಾಡಲು ಈಕೆಳಗಿನಂತೆ ಆದೇಶ.

## -::ಆದೇಶ::-

ಸಂ/ಕಂ/ವಿವಾದ/ 64 /2014-15 ದಿನಾಂಕ: /11/2015 11.7.2016

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ರೂಪನಗುಡಿ ಹೋಬಳಿ ಎತ್ತಿನಬೂದಿಹಾಳು ಗ್ರಾಮದ ಸರ್ವೆ ನಂ:276/ಬಿ/ಅ ವಿಸ್ತೀರ್ಣ:3.98, ಸರ್ವೆ ನಂ:326/ಎ ವಿಸ್ತೀರ್ಣ:2.22 ಎಕರೆ ಜಮೀನಿನ M.R.H.NO:34/2014-15 ದಿನಾಂಕ: 05-02-2015ರಂತೆ ಶ್ರೀ ಟಿ.ಬಸವಕುಮಾರ್ ತಂದೆ ದಿ॥ ಟಿ.ವಿರುಪಾಕ್ಷಪ್ಪ ಇವರ ಹೆಸರಿಗೆ ಪೌತಿ ಹಕ್ಕುಬದಲಾವಣೆ ಮಾಡಲು ಆದೇಶಿದೆ.

ಈ ಆದೇಶವು ಇಂದು ದಿನಾಂಕ: 11.7.2016 ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು

ತಹಶೀಲ್ದಾರರು,
ಬಳ್ಳಾರಿ

ತಹಶೀಲ್ದಾರರು, ಬಳ್ಳಾರಿ
Tasildar, Bellary

**ಪ್ರತಿಯನ್ನು:**

1. ವಾದಿಗಳು ಮುಖಾಂತರ .
2. ಶಿರಸ್ತೇದಾರರು ಭೂಮಿ ಗಣಿಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.
3. ಆದೇಶದ ಕಡತಕ್ಕೆ.

19/7